

# ಸಂತ ಶಿಶುನಾಳ ಶರೀಫ್ ಸಾಹೇಬ

ಡಾ. ಅಬ್ದುಲ್ ಹಮೀದ್

**ಧರ್ಮಸಮನ್ವಯವನ್ನು ಸಾರುವ ಸಂತಶ್ರೇಷ್ಠನ ಜೀವನ–ಸಾಧನೆಗಳನ್ನು ಆತ್ಮೀಯವಾಗಿ ಬಣ್ಣಿಸಿರುವ ಲೇಖಕರು ನಿವೃತ್ತ ಕನ್ನಡ ಉಪನ್ಯಾಸಕರು. ತಿಪಟೂರು ನಿವಾಸಿಗಳಾದ ಇವರು ಸೂಫೀ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿದ್ದಾರೆ.**

## ಜನ್ಮ

ಹತ್ತೊಂಬತ್ತನೇ ಶತಮಾನದಲ್ಲಿ ಬಾಳಿದ ಸಂತ ಶಿಶುನಾಳ ಶರೀಫ್ ಸಾಹೇಬರು ಕರ್ನಾಟಕದಲ್ಲಿ ಪ್ರಪ್ರಥಮ ಮುಸಲ್ಮಾನ ಕವಿ ಎನಿಸಿಕೊಂಡು, ಅಪಾರ ಕೀರ್ತಿಯನ್ನು ಗಳಿಸಿದವರು. ಧಾರವಾಡ ಜಿಲ್ಲೆಯ ಶಿಶುವಿನಹಾಳ ಎಂಬ ಗ್ರಾಮದಲ್ಲಿ ೧೮೧೯ ರ ಮಾರ್ಚ್ ತಿಂಗಳ ಏಳನೇ ದಿನಾಂಕದಂದು ಇವರು ಜನ್ಮತಾಳಿದರು. ಇವರ ತಂದೆಯ ಹೆಸರು ಇಮಾಂ ಸಾಹೇಬರು. ತಾಯಿ ಹಾಜುಮಾ ಎಂದು ತಿಳಿದುಬರುತ್ತದೆ. ಜನಪದರು, ಜ್ಞಾನಿಗಳೆಲ್ಲರೂ ಇವರನ್ನು ಒಬ್ಬ ಮಹಾನ್ ತತ್ತ್ವಜ್ಞಾನಿ, ಆಶುಕವಿ ಮತ್ತು ಜನಪದ ಕವಿ ಎಂದು ಕರೆದಿದ್ದಾರೆ. ಇಂದಿಗೂ ಕನ್ನಡ ಕಾವ್ಯಸಾಹಿತ್ಯಾಕಾಶದಲ್ಲಿ ಮಿನುಗುವ ತಾರೆ ಎಂದೆನಿಸಿದ್ದಾರೆ. ಇವರನ್ನು **ಕರ್ನಾಟಕದ ಕಬೀರರೆಂದೂ** ಕರೆಯಲಾಗಿದೆ. ಇವರು ಹಿಂದೂ ವೇದಾಂತ ಮತ್ತು ಮುಸ್ಲಿಂ ಸೂಫೀ ತತ್ತ್ವಗಳ ಭಾವೈಕ್ಯತೆಯ ಹಿರಿಯ ಕೊಂಡಿಯಾಗಿ ತಮ್ಮ ಜೀವಿತವನ್ನೆಲ್ಲ ಧಾರ್ಮಿಕ ಸಮನ್ವಯತೆಗೆ ಮುಡಿಪಾಗಿಟ್ಟಿದ್ದರು. ತಮ್ಮ ಕಾಲದ ಸಾಮಾಜಿಕ ಜನಜೀವನದಿಂದೆತ್ತಿಕೊಂಡ ಪ್ರತಿಮೆ, ರೂಪಕ, ದೃಷ್ಟಾಂತಗಳ ಸಹಾಯದಿಂದ, ಜೀವನದಲ್ಲಿ ತಾವು ಕಂಡುಂಡ ಅನುಭವಗಳನ್ನು ಬಹಳ ಮಾರ್ಮಿಕವಾಗಿ ಜನರಿಗೆ ಉಣಬಡಿಸಿದ್ದಾರೆ.

## ವಿದ್ಯಾಭ್ಯಾಸ

ಶರೀಫರು ಅಂತಹ ದೊಡ್ಡ ವಿದ್ವಾಂಸರೇನೂ ಆಗಿರಲಿಲ್ಲ. ಏಳನೆಯ ತರಗತಿಯವರೆಗೆ ಮಾತ್ರ ಇವರ ವ್ಯಾಸಂಗವಾಗಿತ್ತು. ಕುಟುಂಬದ ಸಮಸ್ಯೆಯಿಂದ ವ್ಯಾಸಂಗವನ್ನು ಮುಂದುವರಿಸಲಾಗದಿದ್ದರೂ ಸತ್ಸಂಗಿಗಳ ಒಡನಾಡಿಯಾಗಿದ್ದರಿಂದ ಜ್ಞಾನಾರ್ಜನೆಗೆ ಕೊರತೆ ಉಂಟಾಗಲಿಲ್ಲ. ಅಂದಿನ ಹಳ್ಳಿಗರ ಮನರಂಜನೆಯ ಭಾಗವಾಗಿದ್ದ ಬಯಲಾಟ, ಕೋಲಾಟ, ಭಜನೆ, ನಾಟಕ ಮತ್ತು ಸಂಗೀತಗಳಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ನಿಪುಣತೆಯನ್ನು ಪಡೆದುಕೊಳ್ಳುತ್ತಿದ್ದರು; ಕ್ರಮೇಣ ಅನೇಕ

ಬಯಲಾಟಗಳ ಗುರುವೇ ತಾವಾಗಿ ಜನರಲ್ಲಿ ಮೆಚ್ಚುಗೆಯನ್ನು ಪಡೆದರು; ಇವುಗಳ ಜೊತೆಯಲ್ಲಿ ಓದುವುದು, ಕಾವ್ಯವಾಚನ, ಕಾವ್ಯರಚನೆಯಂತಹ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದರು; ರಾಮಾಯಣ, ಮಹಾಭಾರತ, ಪೌರಾಣಿಕ ಕಥೆಗಳನ್ನು ಕೇಳಿ, ನೋಡಿ ತನ್ನ ಜ್ಞಾನವನ್ನು ಹೆಚ್ಚಿಸಿಕೊಂಡರು. ಶಿವಶರಣರ ಕಥೆಗಳ ಮೂಲಕ ಅವರ ಜೀವನ ರಚನೆಗಳಲ್ಲಿ ಮೂಡಿದ ಅಧ್ಯಾತ್ಮವನ್ನು ಚೆನ್ನಾಗಿ ಅರಿತರು. ಇವೆಲ್ಲಕ್ಕೂ ವರಪ್ರಸಾದವೆಂಬಂತೆ ಗೋವಿಂದಭಟ್ಟರೆಂಬ ಶ್ರೇಷ್ಠಜ್ಞಾನಿ, ಜಾತ್ಯತೀತ ಹಾಗೂ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡಿದ್ದ ಒಬ್ಬ ಸನಾತನಿ ಬ್ರಾಹ್ಮಣ ಗುರುಗಳೂ ದೊರೆತದ್ದು ಇವರಿಗೆ ಒಂದು ಸೌಭಾಗ್ಯವಾಗಿ ಪರಿಣಮಿಸಿತು. ಇದರಿಂದ ಶರೀಫರ ಆನಂದಕ್ಕೆ ಪಾರವೇ ಇರಲಿಲ್ಲ. ಗುರುಗಳ ನಿತ್ಯಸೇವೆಯಲ್ಲಿ ಮಗ್ನರಾಗಿ ಜ್ಞಾನವನ್ನು ಪಡೆಯಲಾರಂಭಿಸಿದರು. ಈ ಸಂದರ್ಭದ ತನ್ನ ಸಂತೋಷವನ್ನು ಅವರು ಹೀಗೆ ವ್ಯಕ್ತಪಡಿಸುತ್ತಾರೆ:

**ನನ್ನೊಳಗೆ ತಿಳಕೊಂಡೇ**
**ನನಗೆ ಬೇಕಾದ ಗುರುವನ್ನು ಪಡಕೊಂಡೇ**
**ಗುರೂಪದೇಶವ ನಾ ಕೇಳಿಕೊಂಡೇ**
**ಗುರುಗೋವಿಂದನ ಪಾದ ನಾ ಹಿಡಕೊಂಡೇ**

ಈ ಹಾಡಿನಲ್ಲಿ ಹೇಳಿರುವಂತೆ, ಗುರುಗಳ ಕೃಪೆ, ಆಶೀರ್ವಾದ, ಉಪದೇಶಗಳಿಂದಾಗಿ ಶರೀಫರು ಮಹಾಜ್ಞಾನಿಯಾದರು.

**ಸಾಧನೆ**

ಗುರು ಗೋವಿಂದಭಟ್ಟರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದರಿಂದ ಇವರಿಗೆ ಯೋಗವಿದ್ಯೆಯೂ ಲಭಿಸಿತು. ತನ್ನ ತಾನರಿಯಲು ಆರಂಭಿಸಿದ ಶರೀಫರು ಅಧ್ಯಾತ್ಮದ ತುತ್ತತುದಿಗೇರಿದರು. ತಂಬೂರಿಯನ್ನು ಹಿಡಿದು ತಾವೇ ರಚಿಸಿದ ಹಾಡುಗಳನ್ನು ಹಾಡುತ್ತಾ, ಊರೂರು ತಿರುಗುತ್ತಾ, ಜನಸಾಮಾನ್ಯರಲ್ಲಿ ಜ್ಞಾನವನ್ನು ಬಿತ್ತಲಾರಂಭಿಸಿದರು. ಅವರ ರಚನೆಗಳು ಮೇಲ್ನೋಟಕ್ಕೆ ನಮ್ಮ ದಿನನಿತ್ಯದ ಸಂಗತಿಗಳಂತೆ ಕಂಡುಬಂದರೂ, ಅವುಗಳಲ್ಲಿ ಬೇರೆಯದೇ ಆದ ಪಾರಮಾರ್ಥಿಕ ಅರ್ಥಗಳು ತುಂಬಿಕೊಂಡಿರುತ್ತಿದ್ದವು. ಅವುಗಳನ್ನು ಅವರು ಬಹಳ ಮಾರ್ಮಿಕವಾಗಿ ಹಾಡಿ ತಿಳಿಸುತ್ತಿದ್ದರು. ಇವರ ಗೀತೆಗಳನ್ನು ನಾವು ಸಾಂಕೇತಿಕ ಅರ್ಥಗಳಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಈ ಕೆಳಗಿನ ಹಾಡಿನಲ್ಲಿ ಅಂತಹ ಒಂದು ಸುಂದರ ನಿದರ್ಶನವನ್ನು ನೋಡಬಹುದು (*ಬಾಕ್ಸ್ ನೋಡಿ*).

ಈ ಹಾಡಿನಲ್ಲಿ ಹೊಸದೊಂದು ಪಕ್ಷಿರಾಗವಿದೆ. ಪಾರಿವಾಳದ ಹಾರಾಟವು ನೋಡಲು ಚೆಂದ – ರೆಕ್ಕೆಗಳನ್ನು ಬಡಿಯುತ್ತಾ, ಬಹಳೆತ್ತರಕ್ಕೆ ಆಕಾಶದ ಬಯಲಿನಲ್ಲಿ ಹಾರುವುದು ಸಹಜ ಸೌಂದರ್ಯ. **ಸಂದಿ–ಗೊಂದಿಗಳನ್ನು ಬಿಟ್ಟು** ಎಂಬುವುದರಲ್ಲಿ ಈ ಜಗತ್ತಿನ ಮಾನವ ನಿರ್ಮಿತ ಜಾತೀಯ ಕೀಳುಭಾವನೆಗಳನ್ನು ಬಿಟ್ಟು, ಎಲ್ಲರಲ್ಲೂ ಸೋದರಭಾವವನ್ನು ತೋರುವುದರತ್ತ ಸಂಕೇತವಿರುವುದನ್ನು ನಾವು ಗಮನಿಸಬಹುದಾಗಿದೆ. ಕೂಪ ಮಂಡೂಕತ್ವದಿಂದ ಮಾನವನನ್ನು ಮೇಲೆತ್ತುವ ಮಾರ್ಮಿಕ ಅರ್ಥವನ್ನು ಕವಿಯು ಇಲ್ಲಿ ಅಡಗಿಸಿದ್ದಾರೆ; ಉದಾತ್ತ ಗುಣಗಳನ್ನು ರೂಢಿಸಿಕೊಳ್ಳಲು ಕರೆಯಿತ್ತಿದ್ದಾರೆ. ಮಾನವನ ಅಂತಿಮ ಬಯಕೆಯಾದ ಈ ಸಂಸಾರಜಂಜಡಗಳಿಂದ 'ಬಿಡುಗಡೆ' ಹೊಂದಿ 'ಆನಂದದ ಅನ್ವೇಷಣೆ' ಯತ್ತ ಸಾಗಲು ಯತ್ನಿಸುವ ಹಂಬಲವನ್ನೂ ಅಡಗಿಸಿಟ್ಟಿದ್ದಾರೆ. 'ಹಿಡಿದು ಬಯಲು' ಎಂಬಲ್ಲಿ ಆತ್ಮವು ಬಿಡುಗಡೆ ಹೊಂದಿ ಪರಮಾತ್ಮನಲ್ಲಿ ವಿಲೀನವಾಗಿ ಬಯಲಾಗುವುದನ್ನು ಸಂಕೇತಿಸಿರುವುದು ಅರ್ಥಗರ್ಭಿತವಾಗಿದೆ.



**ಪಾರಿವಾಳದ ಆಟವು ಛಂದ**
**ಅದು ತೇಲುತ ಬಂದರೆ ಮನಸಿಗಾನಂದ**
**ಮುಂದಕೆ ರೆಕ್ಕೆಯ ಬಡಿದು**
**ಹಿಂದೆ ಚೆಂದಾದ ಪುಚ್ಛದ ಗರಿಗಳ ತೆರೆದು**
**ಸಂದಿ–ಗೊಂದಿ ಬಿಟ್ಟು, ಹಿಡಿದು ಬಯಲ**
**ಬಂದರೆ ತೇಲುತ ಆಕಾಶ ಅಲೆದು**
**ಕೆಳಗಡೆ ಕರೆದಾನು ಕಳ್ಳ**
**ಜತೆಹಾರಲು ಕಳಿಸ್ಯಾನು ಪಳಗಿದ ಮಳ್ಳ**
**ಗುರಿಬಿಡಲುಂಟೇನು? ಸುಳ್ಳ**
**ಬಿಟ್ಟು ಸಾಗಲು ಭರ್ತಿ ಮಣ್ಣಿನ ಹಳ್ಳ**
**ಶಿಶುನಾಳಾಧೀಶನ ಯೋಗ–ರಸಿಕರ**
**ಹಸನಾದ ಹಾಡಿದು – ಹೊಸಪಕ್ಷಿರಾಗ.**

ಅಧ್ಯಾತ್ಮ

ಕೆಲವು ಧಾರ್ಮಿಕ ಮೂಲಭೂತವಾದಿಗಳು ಹಾಗೂ ನೈಜ ಧರ್ಮದ ಸಾರವನ್ನರಿಯದೆ ಜಾತೀಯತೆಯನ್ನೇ ಪ್ರಧಾನ ವಾಗಿಟ್ಟುಕೊಂಡಂಥ ಅಜ್ಞಾನಿಗಳು, ಮೇಲೇರಿದ ಮಾನವನನ್ನು ತಮ್ಮ ಕೀಳುಮಟ್ಟಕ್ಕೇ ಪುನಃ ವಾಪಸ್ಸು ಕರೆತರಲು ಏನೆಲ್ಲಾ ಸಾಹಸವನ್ನು ಮಾಡುತ್ತಾರೆ! ಅಂಥವರು 'ಪಳಗಿದ ಮಳ್ಳ'ರನ್ನು ಕಳುಹಿಸುವುದೂ ಉಂಟು. ಆದರೆ ಜ್ಞಾನದ ಅತ್ಯುನ್ನತ ಮಟ್ಟಕ್ಕೆ ತಲುಪಿದ ವ್ಯಕ್ತಿಗಳು ಇಂತಹ ಕ್ಷುಲ್ಲಕ 'ಕಳ್ಳ'ರ ಮಾತುಗಳಿಗೆ ಬೆಲೆ ಕೊಡುವುದಿಲ್ಲ. ಇದನ್ನು ಶರೀಫರು ಬಹಳ ಸುಂದರವಾಗಿ ವರ್ಣಿಸಿದ್ದಾರೆ. ಇವರನ್ನು ಗೋವಿಂದಭಟ್ಟರ ಶಿಷ್ಯನಾಗಲು ಬಿಡದ ಮೂಲಭೂತ ಜಾತಿವಾದಿಗಳು ಮೂಲ ಧರ್ಮದಲ್ಲೇ ಇರಲು ಒತ್ತಾಯಿಸಿರುವ ಸಂಕೇತ ಇಲ್ಲಿ ಸ್ಪಷ್ಟವಾಗಿ ಅರ್ಥವಾಗುತ್ತದೆ. "ಗುರಿ ಬಿಡಲುಂಟೇನು?" ಎಂಬಲ್ಲಿ ತನ್ನ ಗುರಿಬಿಡಲು ಸಿದ್ಧನಿಲ್ಲದ ಸಾಧಕ ಶರೀಫರು, ಹಿಂದಿನ ಜಾತಿವಾದಿ ಹಳ್ಳಕ್ಕೆ ಬೀಳಲು ಸಿದ್ಧರಿಲ್ಲ. ಹಳ್ಳಕ್ಕೇ ಬಿದ್ದು ಮಣ್ಣಿನೊಂದಿಗೆ ಮಣ್ಣಾಗಿ ಗುಂಡಿಯನ್ನು 'ಭರ್ತಿ' ಮಾಡಲು ಇವರಿಗೆ ಇಷ್ಟವಿಲ್ಲ. ಈ ಭಾವನೆಗಳನ್ನು ಅವರು ತಮ್ಮ ಹಾಡಿನಲ್ಲಿ ಹೃದಯಂಗಮವಾಗಿ ಚಿತ್ರಿಸಿರುವುದನ್ನು ನಾವು ಕಾಣಬಹುದಾಗಿದೆ. ಶಿಶುನಾಳಗ್ರಾಮದೇವರಾದ ಶಿಶುನಾಳಾಧೀಶಬಸವನೇ ಅವರ ಆರಾಧ್ಯದೈವ. **'ಶಿಶುನಾಳಾಧೀಶ'** ಎಂಬ ಅಂಕಿತನಾಮದೊಂದಿಗೆ ತಮ್ಮ ಹಾಡುಗಳನ್ನು ಮುಗಿಸುವುದೂ ಒಂದು ವಿಶೇಷ. ತಮ್ಮ ಗುರುಗಳನ್ನು ಮೆಚ್ಚಿಸಿ 'ಹಠಯೋಗ' ಸಾಧನೆಯನ್ನೂ ಮಾಡಿ ಅನೇಕ ಪವಾಡಗಳನ್ನೂ ಮೆರೆದಿದ್ದಾನೆಂಬುದಕ್ಕೆ ಸಾಕಷ್ಟು ಕಥೆಗಳಿವೆ.

ಶಿಶುನಾಳ ಶರೀಫರು ಒಬ್ಬ ಶ್ರೇಷ್ಠ ಕವಿ ಹಾಗೂ ಸಂತರಾಗಿದ್ದರು. ಇವರನ್ನು ಕಂಡು ದ್ವೇಷಿಸುತ್ತಿದ್ದ ಅನೇಕರು ಶರೀಫರನ್ನು ಕೆಟ್ಟ ಮಾತುಗಳನ್ನಾಡಿ ಅವಮಾನಿಸುತ್ತಿದ್ದರು. ಇದರಿಂದ ಮನನೊಂದ ಶರೀಫರು ತಮ್ಮ ಗುರುಗಳಲ್ಲಿ ಇದರ ಬಗ್ಗೆ ಆಗಾಗ್ಗೆ ನಿವೇದಿಸಿಕೊಳ್ಳುತ್ತಿದ್ದರು. ಗಾಸಿಗೊಂಡ ಶಿಷ್ಯನಿಗೆ ಗುರುಗಳು ಸಮಾಧಾನಿಸುತ್ತಿದ್ದುದು ಹೀಗೆ: "ನೀನೊಂದು ಮದ್ದಾನೆಯಿದ್ದಂತೆ, ನೀನು ನಿನ್ನ ಕುಹಕಿಗಳ ವಿಚಾರದಲ್ಲಿ ಉದಾಸೀನ ಮನೋಭಾವದವನಾಗಿರಬೇಕು." ಆಗ ಶರೀಫರು, **ಸದ್ಗುರು ಸಾಕಿದ ಮದ್ದಾನೆ ಬರುತಿದೆ, ಎದ್ದು ಹೋಗಿ ಇದ್ದ ನಿಂದಕರೆ** ಎಂದು ನಿಂದಕರನ್ನು ನಿಂದಿಸುತ್ತ, ಅವರಿಗೆ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಕರೆ ಕೊಡುತ್ತಿದ್ದರು.

## ಮರಣ

ಹೀಗೆ ಎಪ್ಪತ್ತು ವರ್ಷಗಳ ತುಂಬು ಜೀವನವನ್ನು ಸಾಗಿಸಿ, ಸಂಸಾರಸಾಗರದಲ್ಲಿ ಮುಳುಗಿ ಏಳುತ್ತಾ ಬದುಕಿದ್ದ ಶರೀಫ ಸಾಹೇಬರು ಜೀವನಜಂಜಾಟದ ಎಲ್ಲ ಅನುಭವಗಳನ್ನೂ ಅನುಭಾವದೊಂದಿಗೆ, ಹಾಡುಗಳ ಮೂಲಕ ಹರಿಯಬಿಟ್ಟಿದ್ದಾರೆ. ಅವರ ಗೀತೆಗಳಲ್ಲಿ ಜೀವನದ ಸುಖ-ದುಃಖಗಳು ಮಡುಗಟ್ಟಿ ನಿಂತಿವೆ. ಇವರ ನೂರಾರು ಅಧ್ಯಾತ್ಮಪೂರ್ಣ ಹಾಡುಗಳು ಕರ್ನಾಟಕದಾದ್ಯಂತ ಬಹುಜನಪ್ರಿಯವಾಗಿವೆ, ಎಲ್ಲ ಧರ್ಮೀಯರ ಬದುಕಿಗೆ ದಾರಿದೀಪವಾಗಿವೆ. ಶಿಶುನಾಳ ಶರೀಫರು ಕುಳಿತಲ್ಲಿ ನಿಂತಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಗೀತೆಗಳನ್ನು ರಚಿಸುವ ಶಕ್ತಿ ಪಡೆದಿದ್ದರು. ಇವರ ಮೇಲೆ ಸೂಫೀ ದರ್ವೇಶರ ಪ್ರಭಾವವೂ ಇತ್ತು. ಸೂಫೀ ಅದ್ವೈತ ಸಿದ್ಧಾಂತಕ್ಕನುಸಾರವಾಗಿ ಪರಮಾತ್ಮನಲ್ಲಿ ಐಕ್ಯವನ್ನು ಪಡೆಯಲು ಇವರು ಹಂಬಲಿಸಿರುವುದೂ ಉಂಟು. ಹೀಗೆ ಸದಾಕಾಲ ಸತ್ಪುರುಷರ ಸಹವಾಸದಲ್ಲಿ ಬೆಳೆದು ಶ್ರೇಷ್ಠ ಕವಿ ಮತ್ತು ದಿವ್ಯ ಮಾನವರಾಗಿ ಬೆಳಗಿದ ಶಿಶುನಾಳ ಶರೀಫರು ಕ್ರಿ.ಶ. ೧೮೮೯ ಮಾರ್ಚ್ ಏಳನೇ ದಿನಾಂಕದಂದು ತಮ್ಮ ಜನ್ಮದಿನದಂದೇ ಮಹಾಬೆಳಗಿನಲ್ಲಿ ಐಕ್ಯರಾಗಿ ಬಯಲಾಗಿರುವುದು ಒಂದು ಅದ್ಭುತವೇ ಆಗಿದೆ. **ಶರಣರ ಮಹಿಮೆ ಮರಣದಲ್ಲಿ ಕಾಣು** ಎಂಬಂತೆ ಶರೀಫ ಸಾಹೇಬರು **ಬಿಡತೀನಿ ದೇಹ ಬಿಡತೀನಿ** ಎನ್ನುತ್ತಾ ತನ್ನ ಜೀವನದ ಕೊನೆಯುಸಿರೆಳೆದಿದ್ದಾರೆ. ಶರೀಫ ಕನ್ನಡ ಅಧ್ಯಾತ್ಮಸಾಹಿತ್ಯದ ಒಂದು ಅನರ್ಘ್ಯ ರತ್ನ ಎಂದರೆ ಅತಿಶಯೋಕ್ತಿಯಾಗಲಾರದು. ★


## ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (ರಿಂಸೆ)

**ಯಾದವಗಿರಿ, ಮೈಸೂರು-570020 ಫೋನ್: 0821-2417666, 2412800**

**ಇ-ಮೇಲ್: mysore.rimse@gmail.com**

ಮೈಸೂರಿನಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಅಂಗಸಂಸ್ಥೆಯಾದ ರಿಂಸೆಯು ಅನೇಕ ವರ್ಷಗಳಿಂದ ಶಾಲಾ ಹಾಗೂ ಕಾಲೇಜಿನ ವಿದ್ಯಾರ್ಥಿಗಳಿಗೆ ಮೌಲ್ಯಶಿಕ್ಷಣ ಶಿಬಿರಗಳನ್ನು ಏರ್ಪಡಿಸುತ್ತ ಬಂದಿದೆ. ಈ ವರ್ಷ ತೃತೀಯ ವರ್ಷದ ಬಿ.ಎ ಹಾಗೂ ಬಿ.ಎಸ್ ಸಿ. ಯಲ್ಲಿ ಓದುತ್ತಿರುವ **ಪುರುಷ** ವಿದ್ಯಾರ್ಥಿಗಳಿಗೆ **"ವ್ಯಕ್ತಿ ಹಾಗೂ ಸಮಾಜದ ಬೆಳವಣಿಗೆಗೆ ಮೌಲ್ಯ"**ಗಳನ್ನು ಕುರಿತ ಕಾರ್ಯಾಗಾರವನ್ನು ತನ್ನ ಆವರಣದಲ್ಲಿ ನಡೆಸಲು ತೀರ್ಮಾನಿಸಿದೆ. ಎರಡು ದಿನಗಳ ಈ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಯೋಗ, ಪ್ರಾರ್ಥನೆ, ಧ್ಯಾನಗಳೊಂದಿಗೆ ಉತ್ತಮ ಉಪನ್ಯಾಸಕರಿಂದ ಮೌಲ್ಯಜೀವನ ಹಾಗೂ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬದುಕಲು ಬೇಕಾದ ವ್ಯಕ್ತಿತ್ವವನ್ನು ರೂಪಿಸಲು ಸಲಹೆ ನೀಡಲಾಗುತ್ತದೆ. ಸಂಸ್ಥೆಯ ಆವರಣದಲ್ಲಿನ ಎರಡು ದಿನಗಳ ವಾಸವು ವಿದ್ಯಾರ್ಥಿಗಳ ಆಧ್ಯಾತ್ಮಿಕ ಹಾಗೂ ನೈತಿಕಶಕ್ತಿಯನ್ನು ಪ್ರಚೋದಿಸಲು ಸಹಾಯ ಮಾಡುತ್ತದೆ. ತಮ್ಮ ವಿದ್ಯಾರ್ಥಿಗಳಿಗೆ ಈ ಸದವಕಾಶವನ್ನು ಕಲ್ಪಿಸಲು ಇಚ್ಛಿಸುವ ಕಾಲೇಜುಗಳ ಮುಖ್ಯಸ್ಥರು ಸಂಸ್ಥೆಯ ಕರೆಸ್ಪಾಂಡೆಂಟರನ್ನು ಈ ಮೇಲಿನ ವಿಳಾಸಕ್ಕೆ ಪತ್ರ ಮುಖೇನ, ಈ-ಮೇಲ್ ಮೂಲಕ ಅಥವಾ ದೂರವಾಣಿಯ ಮೂಲಕ ಕೂಡಲೇ ಸಂಪರ್ಕಿಸಿ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಳ್ಳಬಹುದು. ಕಾರ್ಯಾಗಾರವು ಉಚಿತವಾಗಿರುತ್ತದೆ.